**ಹೊಸ ಸಾರ್ವಜನಿಕ ಕಟ್ಟಡಗಳು, ಕೆ.ಆರ್.ವೃತ್ತ, ಬೆಂಗಳೂರು - 560 001**

ಸಂಖ್ಯೆ: ಸಶಿಅ/ಶೈತ/ಸಿ1/ಬಿ.ಆರ್.ಸಿ/2012-13 ದಿನಾಂಕ: 25-04-2012

## ಅಧಿಕೃತ ಜ್ಞಾಪನ

ವಿಷಯ: ಕ್ಷೇತ್ರ ಸಂಪನ್ಮೂಲ ಕೇಂದ್ರಗಳಿಗೆ ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿಗಳ ಹುದ್ದೆಗಳನ್ನು ಲಿಖಿತ ಪರೀಕ್ಷೆಯ ಮೂಲಕ ಭರ್ತಿ ಮಾಡುವ ಕುರಿತು.

***********

ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ ನಿಟ್ಟಿನಲ್ಲಿ ಮಕ್ಕಳ ಕಲಿಕಾ ಸಾಮರ್ಥ್ಯ ಉತ್ತಮ ಪಡಿಸುವ ಸಲುವಾಗಿ ಬ್ಲಾಕ್ ಹಂತದಲ್ಲಿ ಬಿ.ಆರ್.ಸಿ ಕೇಂದ್ರಗಳನ್ನು ಸ್ಥಾಪಿಸಿ ಪ್ರೌಢಶಾಲಾ ಮುಖ್ಯೋಪಾಧ್ಯಾಯ ವೃಂದದ ಗ್ರೂಪ್ 'ಬಿ' ದರ್ಜೆಯ ಹುದ್ದೆಗಳನ್ನು ಮಂಜೂರು ಮಾಡಿ ಈಗಾಗಲೇ ಭರ್ತಿ ಮಾಡಲಾಗಿದೆ. ಈ ಕೇಂದ್ರಗಳು ಶಿಕ್ಷಕರಿಗೆ ಮಾರ್ಗದರ್ಶನ ಮತ್ತು ತರಬೇತಿ ನೀಡುವ ಮೂಲಕ ಶಿಕ್ಷಕರ ಸಬಲೀಕರಣ ಮಾಡುವ ಜವಾಬ್ದಾರಿಯನ್ನು ಹೊಂದಿರುತ್ತವೆ.

ಈಗಾಗಲೇ ಖಾಲಿಯಾಗಿರುವ ಹಾಗೂ ಇನ್ನು ಮುಂದೆ ಖಾಲಿಯಾಗುವ ಸಂಭವನೀಯ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರಿ ಪ್ರೌಢಶಾಲೆ, ಮುಖ್ಯೋಪಾಧ್ಯಾಯರು ಹಾಗೂ ತತ್ಸಮಾನ ವೃಂದದವರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಸದರಿ ಹುದ್ದೆಗಳನ್ನು ಲಿಖಿತ ಪರೀಕ್ಷೆ ಮೂಲಕ ಭರ್ತಿ ಮಾಡಲಾಗುವುದು.

### a. ಬಿ.ಆರ್.ಸಿ ಹುದ್ದೆಗೆ ಆಯ್ಕೆ ಆಗಲು ಇರಬೇಕಾದ ಅರ್ಹತೆಗಳು :

i ಸರಕಾರಿ ಪ್ರೌಢಶಾಲಾ ಮುಖ್ಯೋಪಾಧ್ಯಾಯರು, ಹಾಗೂ ತತ್ಸಮಾನ ವೃಂದದ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿರುವವರು ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.

ii ವಯೋಮಿತಿ : ಅರ್ಜಿಗಳನ್ನು ಆಹ್ವಾನಿಸಲು ಅಧಿಕೃತ ಜ್ಞಾಪನ ಪ್ರಕಟಿಸಿದ ದಿನಾಂಕಕ್ಕೆ - 50 ವರ್ಷಗಳನ್ನು ಮೀರಿರಬಾರದು.

iii ಯಾವುದೇ ಇಲಾಖಾ ಶಿಸ್ತು ಕ್ರಮಕ್ಕೆ ಅಥವಾ ನ್ಯಾಯಾಲಯ / ಕ್ರಿಮಿನಲ್ ಪ್ರಕರಣಗಳಲ್ಲಿ ಒಳಗಾಗಿರಬಾರದು.

iv ಬಿ.ಆರ್.ಸಿ ಆಗಿ ಕಾರ್ಯನಿರ್ವಹಿಸುತ್ತಿದ್ದು ದಿನಾಂಕ : 01.06.2012 ಕ್ಕೆ ಮೂರು ವರ್ಷ ಪೂರ್ಣವಾಗುತ್ತಿದ್ದಲ್ಲಿ ಅವರು ಸಹ ಪರೀಕ್ಷೆಯನ್ನು ತೆಗೆದುಕೊಳ್ಳಲು ಅರ್ಹರು. ಆದರೆ ಬಿ.ಆರ್.ಸಿ ಹುದ್ದೆಗೆ ಆಯ್ಕೆಗೊಂಡ ಪಕ್ಷದಲ್ಲಿ ಅವರು ಕಾರ್ಯನಿರ್ವಹಿಸುತ್ತಿರುವ ಕ್ಷೇತ್ರಕ್ಕೆ ಸ್ಥಳ ನಿಯುಕ್ತಿಗೊಳಿಸಲು ಅವಕಾಶವಿರುವುದಿಲ್ಲ.

v ಪ್ರೌಢಶಾಲಾ ಮುಖ್ಯೋಪಾಧ್ಯಾಯರು ಅಥವಾ ತತ್ಸಮಾನ ಹುದ್ದೆಯಲ್ಲಿ ಅಧಿಕೃತ ಜ್ಞಾಪನಾ ಹೊರಡಿಸಿದ ದಿನಾಂಕಕ್ಕೆ ಕನಿಷ್ಠ 5 ವರ್ಷಗಳ ಸೇವೆ ಪೂರ್ಣಗೊಂಡಿರಬೇಕು.

**b. ಆಯ್ಕೆ ಪ್ರಕ್ರಿಯೆ :**

i ಆಯ್ಕೆ ಪ್ರಕ್ರಿಯೆಗಾಗಿ ಆಯುಕ್ತರು, ಅಪರ ಆಯುಕ್ತರ, ವ್ಯಾಪ್ತಿಯ ಪ್ರದೇಶವನ್ನು ಒಂದು ಘಟಕವಾಗಿ ಪರಿಗಣಿಸಲಾಗುವುದು.

ii ಆಯ್ಕೆ ಪರೀಕ್ಷೆಯನ್ನು ಆಯುಕ್ತರು, ಅಪರ ಆಯುಕ್ತರ ನೇತೃತ್ವದಲ್ಲಿ ನಡೆಸಲಾಗುವುದು.

iii ಪ್ರಶ್ನೆ ಪತ್ರಿಕೆಗಳನ್ನು ಡಿ.ಎಸ್.ಇ.ಆರ್.ಟಿ ಸಿದ್ಧಪಡಿಸುತ್ತದೆ.

iv ಲಿಖಿತ ಪರೀಕ್ಷೆಯು ರಾಜ್ಯಾದ್ಯಂತ ನಿಗದಿಪಡಿಸಿದ ಒಂದೇ ದಿನಾಂಕದಂದು ನಡೆಸಲಾಗುವುದು.

v 1ನೇ ತರಗತಿಯಿಂದ 8ನೇ ತರಗತಿವರೆಗೆ ರಾಜ್ಯ ಸರ್ಕಾರದಿಂದ ನಿಗದಿಪಡಿಸಲಾದ ಪಠ್ಯ ವಸ್ತುವು ಪರೀಕ್ಷಾ ವಿಷಯವಾಗಿರುತ್ತದೆ.

**c. ಲಿಖಿತ ಪರೀಕ್ಷೆಗೆ ನಿಗದಿಪಡಿಸಿದ ವಿಷಯಗಳು :**

| | | | |
|---|---|---|---|
| i | ಸಾಮಾನ್ಯ ಕನ್ನಡ | – | 10 ಅಂಕಗಳು |
| ii | ಸಾಮಾನ್ಯ ಇಂಗ್ಲೀಷ್ | – | 10 ಅಂಕಗಳು |
| iii | ವಿಜ್ಞಾನ | – | 10 ಅಂಕಗಳು |
| iv | ಗಣಿತ | – | 10 ಅಂಕಗಳು |
| v | ಸಮಾಜ ವಿಜ್ಞಾನ | – | 10 ಅಂಕಗಳು |
| vi | ಸಾಮಾನ್ಯ ಜ್ಞಾನ | – | 10 ಅಂಕಗಳು |
| vii | ಶೈಕ್ಷಣಿಕ ಆಸಕ್ತಿ | – | 10 ಅಂಕಗಳು |
| viii | ಶೈಕ್ಷಣಿಕ ಕಾರ್ಯಕ್ರಮಗಳು | – | 10 ಅಂಕಗಳು |
| | **ಒಟ್ಟು** | – | **80 ಅಂಕಗಳು** |

**d. ಸೇವಾನುಭವಕ್ಕೆ ನಿಗದಿಪಡಿಸಿರುವ ಗರಿಷ್ಠ ಅಂಕಗಳು 10 :**

| | | | |
|---|---|---|---|
| i | 6 ರಿಂದ 10 ವರ್ಷ ಸೇವೆಗೆ | – | 04 ಅಂಕಗಳು |
| ii | 11 ರಿಂದ 15 ವರ್ಷ ಸೇವೆಗೆ | – | 06 ಅಂಕಗಳು |
| iii | 16 ರಿಂದ 20 ವರ್ಷ ಸೇವೆಗೆ | – | 08 ಅಂಕಗಳು |
| iv | 20 ವರ್ಷಗಳಿಗೂ ಹೆಚ್ಚು ಸೇವೆಗೆ | – | 10 ಅಂಕಗಳು |

**e. ವಿದ್ಯಾರ್ಹತೆಗೆ ನಿಗದಿಪಡಿಸಿರುವ ಅಂಕಗಳು :**

| | | |
|---|---|---|
| i ಪಿ.ಹೆಚ್.ಡಿ / ಎಂ.ಫಿಲ್ | – | 03 ಅಂಕಗಳು |
| ii ಸ್ನಾತಕೋತ್ತರ ಪದವಿ | – | 02 ಅಂಕಗಳು |
| iii ಕನಿಷ್ಠ 3 ತಿಂಗಳ ಕಂಪ್ಯೂಟರ್ ತರಬೇತಿಗೆ | – | 02 ಅಂಕಗಳು |
| iv ಕ್ರಿಯಾ ಸಂಶೋಧನೆ ಅಥವಾ ರಾಜ್ಯ ಮಟ್ಟದ ಪತ್ರಿಕೆಗಳಲ್ಲಿ ಯಾವುದಾದರು ಅಧ್ಯಾಯನ ಪ್ರಕಟಗೊಳಿಸಿದ್ದಲ್ಲಿ | – | 03 ಅಂಕಗಳು |
| **ಒಟ್ಟು** | – | **10 ಅಂಕಗಳು** |

ಒಟ್ಟು 100 ಅಂಕಗಳಿಗೆ ಮೇಲಿನ c,d,e ವಲಯದಿಂದ ಕನಿಷ್ಠ 40 ಅಂಕಗಳನ್ನು ಗಳಿಸಿರಬೇಕು. ಅದರಂತೆ ಮೆರಿಟ್ ಪಟ್ಟಿಯನ್ನು ತಯಾರಿಸುವುದು. ಸ್ಥಳ ನಿಯುಕ್ತಿಯನ್ನು ಈ ಕಛೇರಿಯಿಂದ ಪ್ರತ್ಯೇಕ ಆದೇಶ ನೀಡಿದ ನಂತರ ಪ್ರಾರಂಭಿಸುವುದು. ಸ್ಥಳ ನಿಯುಕ್ತಿಯ ನಂತರ ರ್‍ಯಾಂಕ್ ಪಟ್ಟಿಯನ್ನು ಕಾಯ್ದಿರಿಸಿದ ಪಟ್ಟಿ ಎಂದು ಪರಿಗಣಿಸಲಾಗುವುದು. ಈ ಪಟ್ಟಿ ಒಂದು ವರ್ಷದವರೆಗೂ ಸಿಂಧುವಾಗಿರುತ್ತದೆ. ಲಿಖಿತ ಪರೀಕ್ಷೆಯ ವೇಳಾಪಟ್ಟಿಯನ್ನು ಅನುಬಂಧ 1 ರಲ್ಲಿ ಹಾಗೂ ಅರ್ಜಿ ನಮೂನೆಯನ್ನು ಅನುಬಂಧ 2 ರಲ್ಲಿ ಲಗತ್ತಿಸಿದೆ. ಸದರಿ ಮಾಹಿತಿಯು ಈ ಕಛೇರಿಯ ವೆಬ್‌ಸೈಟ್ www.ssakarnataka.gov.in. ರಲ್ಲಿ ಲಭ್ಯವಿರುತ್ತದೆ.

ಆಯುಕ್ತರು, ಹಾಗೂ ರಾಜ್ಯ ಯೋಜನಾ ನಿರ್ದೇಶಕರು
ಸರ್ವ ಶಿಕ್ಷಣ ಅಭಿಯಾನ – ಕರ್ನಾಟಕ

**ಪ್ರತಿಯನ್ನು ಸಂಬಂಧಿಸಿದವರಿಗೆ ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ :**

1. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
2. ಹೆಚ್ಚುವರಿ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ.
3. ಹೆಚ್ಚುವರಿ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ.
4. ನಿರ್ದೇಶಕರು, ಡಿ.ಎಸ್.ಇ.ಆರ್.ಟಿ ಇವರಿಗೆ ಸೂಕ್ತ ಕ್ರಮಕ್ಕಾಗಿ.
5. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಸೂಕ್ತ ಕ್ರಮಕ್ಕಾಗಿ.
6. ರಾಜ್ಯದ ಎಲ್ಲಾ ಉಪನಿರ್ದೇಶಕರು (ಅಭಿವೃದ್ಧಿ ಡಯಟ್) ಸೂಕ್ತ ಕ್ರಮಕ್ಕಾಗಿ.
7. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳ ಅಗತ್ಯ ಕ್ರಮಕ್ಕಾಗಿ.

ಅನುಬಂಧ-1

ಬಿ.ಆರ್.ಸಿ ಲಿಖಿತ ಪರೀಕ್ಷ ಬಗ್ಗೆ ಕಾರ್ಯಸೂಚಿ/ವೇಳಾಪಟ್ಟಿ

| ಕ್ರ.ಸಂ | ಚಟುವಟಿಕೆ | ನಿರ್ವಹಿಸುವವರು | ದಿನಾಂಕ |
|---|---|---|---|
| 1 | ಅಧಿಕೃತ ಜ್ಞಾಪನಾ ಪತ್ರ ಹೊರಡಿಸುವುದು ಮತ್ತು ಪ್ರಕಟಣೆ ಇಡೀ (ರಾಜ್ಯದ ಎಲ್ಲಾ ಡಿ.ಡಿ.ಪಿ.ಐ, ಡಯಟ್ ಪ್ರಾಂಶುಪಾಲರು ಮತ್ತು ಸಂಬಂಧಿಸಿದ ಅಧಿಕಾರಿಗಳಿಗೆ ಇ-ಮೇಲ್ ಮೂಲಕ ಜ್ಞಾಪನಾ ಕಳುಹಿಸುವುದು. | ರಾಜ್ಯ ಯೋಜನಾ ನಿರ್ದೇಶಕರು | 28.04.2012 |
| 2 | ಪತ್ರಿಕಾ ಪ್ರಕಟಣೆ ಇಡೀ ರಾಜ್ಯದಲ್ಲಿ ಒಂದೇ ದಿನ ಹೊರಡಿಸುವುದು | ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರು (ಆಡಳಿತ) | 30.04.2012 |
| 3 | ಬಿ.ಆರ್.ಸಿ. ಹುದ್ದೆಗಳಿಗೆ ಪ್ರೌಢ ಶಾಲಾ ಮುಖ್ಯೋಪಾಧ್ಯಯ ವೃಂದ ಬಿ ವರ್ಗದ ಅಧಿಕಾರಿಗಳಿಂದ ಅರ್ಜಿ ಸ್ವೀಕಾರ (ಅರ್ಜಿ ನಮೂನೆ) | ಸಂಬಂಧಿಸಿದ ಆಯಾ ಜಿಲ್ಲಾ ಉಪನಿರ್ದೇಶಕರು (ಆಡಳಿತ) | 10.05.2012 |
| 4 | ಉಪನಿರ್ದೇಶಕರು (ಆಡಳಿತ) ರವರಿಂದ ನೊಂದಾಯಿತ ಅರ್ಜಿಗಳನ್ನು ಆಯುಕ್ತರಿಗೆ/ ಅಪರ ಆಯುಕ್ತರಿಗೆ ಸಲ್ಲಿಸುವುದು. | ಉಪನಿರ್ದೇಶಕರು (ಆಡಳಿತ) | 14.05.2012 |
| 5 | ಪ್ರಶ್ನೆಪತ್ರಿಕೆ ಬೇಡಿಕೆಯನ್ನು ಡಿ.ಎಸ್.ಇ.ಆರ್.ಟಿ.ಗೆ ಸಲ್ಲಿಸುವುದು. | ಆಯುಕ್ತರು/ ಅಪರ ಆಯುಕ್ತರ ಕಛೇರಿಗಳಿಂದ | 16.05.2012 |
| 6 | ಪ್ರಶ್ನೆ ಪತ್ರಕೆ ಮುದ್ರಿಸಿ ಆಯಾ ಆಯುಕ್ತಾಲಯಗಳಿಗೆ ಸರಬರಾಜು ಮಾಡಲು ಪೂರ್ವಸಿದ್ದತೆ. | ಡಿ.ಎಸ್.ಇ.ಆರ್.ಟಿ | 22.05.2012 |
| 7 | ಡಿ.ಎಸ್.ಇ.ಆರ್.ಟಿ ಯಿಂದ ಆಯುಕ್ತಾಲಯಗಳು ಪ್ರಶ್ನೆ ಪತ್ರಕೆ ಪಡೆಯುವುದು. | ಡಿ.ಎಸ್.ಇ.ಆರ್.ಟಿ. | 25.05.2012 |
| 8 | ಲಿಖಿತ ಪರೀಕ್ಷೆ ಇಡೀ ರಾಜ್ಯದಲ್ಲಿ ಒಂದೇ ದಿನ ನಡೆಸುವುದು. | ಆಯುಕ್ತರು/ ಅಪರ ಆಯುಕ್ತರು (ಬೆಂಗಳೂರು, ಮೈಸೂರು, ಧಾರವಾಡ, ಮತ್ತು ಗುಲ್ಬರ್ಗಾ) | 27.05.2012 |

4

<u>ಅನುಬಂಧ – 2</u>

**ಕ್ಷೇತ್ರ ಸಂಪನ್ಮೂಲ ಕೇಂದ್ರಗಳ ಸಮನ್ವಯಾಧಿಕಾರಿಗಳ (ಬಿ.ಆರ್.ಸಿ) ಆಯ್ಕೆಗಾಗಿ ಸಲ್ಲಿಸುವ ಅರ್ಜಿ ನಮೂನೆ**

**ಅರ್ಜಿ ಸಲ್ಲಿಸುವ ಅಧಿಕಾರಿಗಳ ವೈಯಕ್ತಿಕ ಮಾಹಿತಿ**

| ಕ್ರ.ಸಂ | ವಿವರಗಳು | ಅರ್ಜಿಸಲ್ಲಿಸುವ ಅಧಿಕಾರಿಗಳ ಮಾಹಿತಿ |
|---|---|---|
| 1 | ಹೆಸರು (ದಪ್ಪ ಅಕ್ಷರಗಳಲ್ಲಿ) | |
| 2 | ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಹುದ್ದೆ, ಸ್ಥಳ | |
| 3 | ಅಂಚೆ ವಿಳಾಸ (ಪಿನ್ ಕೋಡ್ ಸಹಿತ) | |
| 4 | ಜನ್ಮ ದಿನಾಂಕ | ............ವರ್ಷ .............ತಿಂಗಳು ...........ದಿನಗಳು |
| 5 | ಶಿಕ್ಷಕರು ಹೊಂದಿದ ವಿದ್ಯಾರ್ಹತೆ, ದೃಢೀಕೃತ ಪ್ರಮಾಣ ಪತ್ರಗಳೊಂದಿಗೆ ಲಗತ್ತಿಸುವುದು. | 1.ಪಿ.ಹೆಚ್.ಡಿ/ಎಂ.ಫಿಲ್. ☐<br>2. ಸ್ನಾತಕೋತ್ತರ ಪದವಿ ☐<br>3.ಕಂಪ್ಯೂಟರ್ ತರಬೇತಿ ☐<br>4.ಕ್ರಿಯಾ ಸಂಶೋದನೆ ಅಥವಾ ರಾಜ್ಯ ಮಟ್ಟದ ಪತ್ರಿಕೆಗಳಲ್ಲಿ ಯಾವುದಾದರು ಲೇಖನ ಪ್ರಕಟಿಸಿರುವ ಬಗ್ಗೆ. ☐ |
| 6 | ಗ್ರೂಪ್ ಬಿ.ಹುದ್ದೆಗೆ ಸೇರಿದ ದಿನಾಂಕ | |
| 7 | ಈ ಹಿಂದೆ ಬಿ.ಆರ್.ಸಿ ಯಾಗಿ ಕಾರ್ಯನಿರ್ವಹಿಸಲಾಗಿದೆಯೇ? | |
| 8 | ಹೌದಾದಲ್ಲಿ ಎಲ್ಲಿ ಮತ್ತು ಯಾವ ಅವಧಿಯಲ್ಲಿ (ಎಲ್ಲಿಂದ ಎಲ್ಲಿಗೆ) | |
| 9 | ಯಾವುದೇ ಇಲಾಖಾ ಶಿಸ್ತು ಕ್ರಮಕ್ಕೆ ಅಥವಾ ನ್ಯಾಯಾಲಯ / ಕ್ರಿಮಿನಲ್ ಪ್ರಕರಣಗಳಲ್ಲಿ ಒಳಗಾಗಿದ್ದಿರಾ ? | ಹೌದು ಇಲ್ಲ |

**ಅಭ್ಯರ್ಥಿಯ ಸ್ವಯಂ ಘೋಷಣೆ:–** ನಾನು ಮೇಲೆ ಹೇಳಿದ ವಿವರಗಳು ಸತ್ಯನಿಷ್ಠವಾಗಿಲ್ಲದಿದ್ದಲ್ಲಿ ಇಲಾಖೆ ಜರುಗಿಸುವ ಶಿಸ್ತುಕ್ರಮಕ್ಕೆ ಬದ್ಧನಾಗಿರುತ್ತೇನೆ.

ಅಭ್ಯರ್ಥಿಯ ಹೆಸರು ಮತ್ತು ಸಹಿ

ಸ್ಥಳ:–
ದಿನಾಂಕ:–

ಮೇಲು ಸಹಿ

ಉಪನಿರ್ದೇಶಕರು
ಸಾರ್ವಜನಿಕ ಶಿಕ್ಷಣ ಇಲಾಖೆ
....................ಜಿಲ್ಲೆ.

ಸ್ಥಳ:–
ದಿನಾಂಕ:–